# C

# CCE PF
# CCE PR
# NSR & NSPR

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESHWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2022**

**S.S.L.C. EXAMINATION, MARCH / APRIL, 2022**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 30. 03. 2022 ] **ಸಂಕೇತ ಸಂಖ್ಯೆ : 33-K**

Date : 30. 03. 2022 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh & Private Repeater / NSR & NSPR)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 5 × 1 = 5 |
| 1. | ಅನುಸ್ವಾರ, ವಿಸರ್ಗಗಳನ್ನು ಹೀಗೆ ಕರೆಯುತ್ತಾರೆ<br>(ಎ) ಯೋಗವಾಹಗಳು (ಬಿ) ಸ್ವರಗಳು<br>(ಸಿ) ವ್ಯಂಜನಗಳು (ಡಿ) ಅನುನಾಸಿಕಗಳು<br>***ಉತ್ತರ :*** (ಎ) ಯೋಗವಾಹಗಳು | |
| 2. | ದ್ವಿರುಕ್ತಿ ಪದವಿದು<br>(ಎ) ಕ್ರಿಮಿಕೀಟ (ಬಿ) ದೊಡ್ಡದೊಡ್ಡ<br>(ಸಿ) ಹಗಲಿರುಳು (ಡಿ) ಸುಖದುಃಖ<br>***ಉತ್ತರ :*** (ಬಿ) ದೊಡ್ಡದೊಡ್ಡ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಆಗಮ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ಮತ್ತೊಬ್ಬ (ಬಿ) ವೀರೇಶ<br>(ಸಿ) ದೇವಾಲಯ (ಡಿ) ಕಾಶಿಯಲ್ಲಿ<br>***ಉತ್ತರ :*** (ಡಿ) ಕಾಶಿಯಲ್ಲಿ | |
| 4. | ಬಾಂದಳದಲ್ಲಿ – ಪದದಲ್ಲಿರುವ ವಿಭಕ್ತಿಯ ಹೆಸರು<br>(ಎ) ಪ್ರಥಮಾ ವಿಭಕ್ತಿ (ಬಿ) ತೃತೀಯಾ ವಿಭಕ್ತಿ<br>(ಸಿ) ಸಪ್ತಮಿ ವಿಭಕ್ತಿ (ಡಿ) ಪಂಚಮಿ ವಿಭಕ್ತಿ<br>***ಉತ್ತರ :*** (ಸಿ) ಸಪ್ತಮಿ ವಿಭಕ್ತಿ | |
| 5. | ರೂಢನಾಮಕ್ಕೆ ಉದಾಹರಣೆಯಾದ ಪದ<br>(ಎ) ಜಿಂಕೆ (ಬಿ) ಇಂದ್ರ<br>(ಸಿ) ಕಾಶಿ (ಡಿ) ಚಂದ್ರ<br>***ಉತ್ತರ :*** (ಎ) ಜಿಂಕೆ | |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | $14 \times 1 = 14$ |
| 6. | ಇಂದ್ರನಿಗೆ ಗಿಳಿಯನ್ನು ಕಂಡು ಆಶ್ಚರ್ಯವಾದದ್ದು ಏಕೆ ?<br>***ಉತ್ತರ :***<br>ಒಣಗಿದ ಮರದಲ್ಲಿ ವಾಸವಾಗಿದ್ದ ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು. | |
| 7. | ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರ ಪ್ರಕಾರ ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ?<br>***ಉತ್ತರ :***<br>ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರ ಪ್ರಕಾರ ದೇಶದ ಉದ್ಧಾರ (ಅಸಿ, ಮಸಿ, ಕೃಷಿ), ಯೋಧ, ಸಾಹಿತಿ, ಕೃಷಿಕ (ರೈತ) ರನ್ನು ಅವಲಂಬಿಸಿದೆ. | |
| 8. | ಸಸ್ತನಿಗಳ ಆಶ್ರಯದಾಣಗಳು ಯಾವುವು ?<br>***ಉತ್ತರ :***<br>ಗುಹೆ, ಪೊಟರೆ, ಗೂಡು ಮತ್ತು ಬಿಲ – ಇವು ಸಸ್ತನಿಗಳ ಆಶ್ರಯದಾಣಗಳು. | |
| 9. | ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ ಹಾಗೂ ವಿಜ್ಞಾನಿಯ ತಂತ್ರಜ್ಞಾನದ ಸಮನ್ವಯತೆ ಇದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 10. | ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು ?<br>**ಉತ್ತರ :**<br>ವಿದ್ಯಾರ್ಥಿಗಳು ಕಾಫಿ ಕುಡಿಯಲು ಬೆಲೆ ಬಾಳುವ ಕಪ್ಪುಗಳನ್ನು ಆರಿಸಿಕೊಂಡರು. | |
| 11. | ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು ?<br>**ಉತ್ತರ :**<br>ಕಾಫಿಗಿಂತ ಕಪ್ಪಿಗೆ ಹೆಚ್ಚು ಮಹತ್ವ ಕೊಡುವುದನ್ನು ಗುರುಗಳು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ. | |
| 12. | ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?<br>**ಉತ್ತರ :**<br>ಪೂಜೆಗೆ ಬೇಕಾದ ಹೂವುಗಳನ್ನು ತರುವುದು ಗೋಪಾಲನ ಬೆಳಗಿನ ಮುಖ್ಯ ಕೆಲಸವಾಗಿತ್ತು. | |
| 13. | ಏಣಿಗೆ ಬೀಳುವ ಭಯವಿಲ್ಲ ಏಕೆ ?<br>**ಉತ್ತರ :**<br>ಗಟ್ಟಿನೆಲದ ಮೇಲೆ ಕಾಲೂರಿ ನಿಂತಿರುವುದರಿಂದ ಏಣಿಗೆ ಬೀಳುವ ಭಯವಿಲ್ಲ. | |
| 14. | ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು ?<br>**ಉತ್ತರ :**<br>ತಪಸಿಗಿಂತ ಜೀವಪ್ರೀತಿ ದೊಡ್ಡದು ಎಂಬುದು ಬುದ್ಧನು ಅರಿತುಕೊಂಡ ಬದುಕಿನ ಸತ್ಯವಾಗಿದೆ. | |
| 15. | ಕವಿ ಸಿ.ಪಿ.ಕೆ.ಯವರು ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಹೇಳಿದ್ದಾರೆ ?<br>**ಉತ್ತರ :**<br>ಕವಿ ಸಿ.ಪಿ.ಕೆ.ಯವರು ನಮ್ಮ ಕರ್ತವ್ಯಗಳನ್ನು ಶಾಂತರೀತಿಯಿಂದ ಸದ್ದುಗದ್ದಲವಿಲ್ಲದೆ ಮಾಡಿ ಮುಗಿಸಬೇಕೆಂದು ಹೇಳಿದ್ದಾರೆ. | |
| 16. | ಅಡಿಗರು ಯಾವುದಕ್ಕೆ ಹಗಲಿರುಳು ಹೋರಾಡಬೇಕೆಂದಿದ್ದಾರೆ ?<br>**ಉತ್ತರ :**<br>ಹೆಗ್ಗುರಿಯ ಸಾಧನೆಗಾಗಿ ಹಗಲಿರುಳು ಹೋರಾಡಬೇಕೆಂದು ಅಡಿಗರು ಹೇಳುತ್ತಾರೆ. | |
| 17. | ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?<br>**ಉತ್ತರ :**<br>ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆಯ ಹಣ್ಣಿಗೆ ಹೋಲಿಸಲಾಗಿದೆ. | |
| 18. | ಸಿದ್ಧರಾಮೇಶ್ವರರು ಹೇಳುವಂತೆ ಕೆರೆಗಳು ನಿಷ್ಪ್ರಯೋಜಕವಾಗುವುದು ಯಾವಾಗ ?<br>**ಉತ್ತರ :**<br>ಕೆರೆಗಳನ್ನು ತೋಡಿ ನೀರು ಬರದಿದ್ದರೆ ಅವು ನಿಷ್ಪ್ರಯೋಜಕ ಎಂದು ಸಿದ್ಧರಾಮೇಶ್ವರರು ಹೇಳಿದ್ದಾರೆ. | |
| 19. | ಕೌರವನ ಸೇನೆ ಉತ್ತರನಿಗೆ ಹೇಗೆ ಕಾಣಿಸಿತು ?<br>**ಉತ್ತರ :**<br>ಕೌರವನ ಸೇನೆ ಉತ್ತರನಿಗೆ ಸಾಗರದಂತೆ ಕಾಣಿಸಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| III. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | 12 × 2 = 24 |
| 20. | ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?<br>***ಉತ್ತರ :***<br>ಸಕಾಲಕ್ಕೆ ಸರಿಯಾಗಿ ಮಳೆ ಬಾರದಿರುವುದು. ಉತ್ತಮ ಬೀಜಗಳ ಕೊರತೆ. ಭೂಮಿ ಬರಡಾಗುತ್ತಿರುವುದು. ಕ್ರಿಮಿ ಕೀಟಗಳ ಹಾವಳಿಯಿಂದ ಬೆಳೆ ನಷ್ಟವಾಗುತ್ತದೆ. ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಇರುವುದು. ಇವೆಲ್ಲವು ರೈತರು ಎದುರಿಸುತ್ತಿರುವ ಸಮಸ್ಯೆಗಳಾಗಿವೆ. | |
| 21. | ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು ? ವಿವರಿಸಿ.<br>***ಉತ್ತರ :***<br>ದೇಶದ ರಕ್ಷಣೆ ಮಾಡುವವರು ಸೈನಿಕರು. ಸೈನಿಕ ಬಲ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧ ಸಾರಿ ನಮ್ಮನ್ನು ತಮ್ಮ ಗುಲಾಮರನ್ನಾಗಿಸಿಕೊಳ್ಳಬಹುದು. ಆದುದರಿಂದ ಸೈನಿಕರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನೂ ಹೊಡೆದು ಹಾಕಿ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲವಾಗಿರಬೇಕು. | |
| 22. | ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?<br>***ಉತ್ತರ :***<br>ಪುಟ್ಟರಾಜರು ಹುಟ್ಟಿದ ಆರು ತಿಂಗಳಿಗೆ ಅವರಿಗೆ ಕಣ್ಣು ಬೇನೆ ಕಾಣಿಸಿಕೊಂಡಿತು. ನಾಟಿ ವೈದ್ಯರಲ್ಲಿ ತೋರಿಸಿದಾಗ ಕಣ್ಣಿಗೆ ನಾಯಿ ಮೈಯಲ್ಲಿರುವ ತೊನಸಿಯನ್ನು ಮುಟ್ಟಿಸುವಂತೆ ಹೇಳಿದರು. ಕಣ್ಣಿಗೆ ತೊನಸಿಯನ್ನು ಮುಟ್ಟಿಸುವಾಗ ಅವು ಕೈಜಾರಿ ಕಣ್ಣೊಳಗೆ ಬಿದ್ದು ಅರಿ ಹರಿಯುವುದರ ಬದಲು ಗುಡ್ಡಿನ ಹರಿದು ಬಿಟ್ಟವು. ಹೀಗೆ ಪುಟ್ಟರಾಜರು ಕಣ್ಣುಗಳನ್ನು ಕಳೆದುಕೊಂಡರು. | |
| 23. | ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವುಗುಟುಕು ಪಡೆದು ಜೀವಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ಎಲ್ಲ ಅನುಭವಗಳೊಂದಿಗೆ ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆಯನ್ನು ಕಾಣುತ್ತೇವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ?<br>**ಉತ್ತರ :**<br>ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಎಲ್ಲ ಕಡೆ ವ್ಯಾಪಾರ ಕಡಿಮೆಯಾಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತಿದೆ. ಹಣಕ್ಕೆ ಬೆಲೆಯೇ ಇಲ್ಲ. ಮಕ್ಕಳು ಬೆಳೆಯುತ್ತಿದ್ದಾರೆ. ಅವರನ್ನು ಅರ್ಥ ಮಾಡಿಕೊಳ್ಳುವುದೆ ಕಷ್ಟವಾಗುತ್ತಿದೆ. ಹೀಗೆಲ್ಲ ತಮ್ಮ ಸಮಸ್ಯೆ ಹಾಗೂ ತೊಂದರೆಗಳನ್ನು ಹೇಳಿಕೊಳ್ಳುತ್ತಿದ್ದರು. | |
| 25. | ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?<br>**ಉತ್ತರ :**<br>ಹೆಡ್ ಮಾಸ್ತರರು ಹಿರಿಯ ವಿದ್ಯಾರ್ಥಿಗಳಿಗೆ 'ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಈ ಕಾಫೀ ಮಾತ್ರ; ಕಪ್ಪುಗಳನ್ನಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ, ಅಲಂಕಾರಗಳ ಬೆನ್ನತ್ತಿ ಓಡಿ ಓಡಿ ಜೀವನವನ್ನು ಮರೆಯಬೇಡಿ. ನಿಮಗೆ ದೊರೆತಿರುವುದನ್ನು ಆಸ್ವಾದಿಸಿ ಕಪ್ಪುಗಳ ಚಿಂತೆ ಬೇಡ ಎಂದು ಬದುಕುವ ರೀತಿಯನ್ನು ಹೇಳಿದರು. | |
| 26. | ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಏಳಿಸಿದಳು ?<br>**ಉತ್ತರ :**<br>ಗೋಪಾಲ ಮಲಗಿರಬಹುದೆಂದು ತಿಳಿದ ತಾಯಿ ಗೋಪಾಲ, ಬೆಳಗಾಯ್ತು ಮೇಲೇಳು; ನೋಡಲ್ಲಿ, ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಕೇಳಲ್ಲಿ, ಹಕ್ಕಿಗಳು ಹಾಡುತ್ತ, ಹಾರಾಡಿ ಕರೆಯುತ್ತಿವೆ ನಿನ್ನ. ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ. ಎದ್ದೇಳು ಗೋಪಾಲ. ಶಾಲೆಗೆ ಹೊತ್ತಾಗುತ್ತದೆ. ಗುರುಗಳೇನೆಂದಾರು ? ಏಳು ಗೋಪಾಲ. ನನ್ನ ಕಂದಾ ಎಂದು ಹೇಳುತ್ತಾಳೆ. | |
| 27. | ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು ?<br>**ಉತ್ತರ :**<br>ಏಣಿಯ ಸಹಾಯದಿಂದ ಮೇಲೇರಿದವರಿಗೆ ಮೇಲಂತಸ್ತು ಶಾಶ್ವತವೂ ಅಲ್ಲ. ಸುರಕ್ಷಿತವೂ ಅಲ್ಲ. ಮೇಲೇರಿದ ನಂತರ ಮೇಲೇರಲು ಸಹಾಯ ಮಾಡಿದವರನ್ನು ಮರೆತರೆ ಅವರಿಗೆ ಒಳಿತಿಲ್ಲ. ಅವರು ತ್ರಿಶಂಕುಗಳಾಗುತ್ತರೆ. ಆಗ ಮತ್ತೆ ನನ್ನ ಸಹಾಯ ಬೇಕೇಬೇಕಾಗುತ್ತದೆ. ಆದ್ದರಿಂದ ಮೇಲೇರಲು ಸಹಾಯ ಮಾಡಿದವರನ್ನು ಎಂದಿಗೂ ಮರೆಯಬಾರದು ಎಂಬುದು ಏಣಿಯ ಉಪದೇಶವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು ?<br>***ಉತ್ತರ :***<br>ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕೋಗಿಲೆಯ ಹಾಡು ದೂರದಿಂದ ಕೇಳಿತು. ಬಾನಿನಲ್ಲಿ ಬೆಳ್ಳಿಚುಕ್ಕಿ ಮೂಡಿದವು. ಬೋಧಿವೃಕ್ಷದಲ್ಲಿ ಮಹಾ ಬೆಳಕು ಮೂಡಿತು. ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿ ಹೂವ ಬಿಟ್ಟು ಸಂತೋಷ ವ್ಯಕ್ತಪಡಿಸಿತು. ಹಕ್ಕಿ ತನ್ನ ಮರಿಗೆ ಗುಟುಕು ಕೊಟ್ಟು ಪ್ರೀತಿಯನ್ನು ಹಂಚಿತು. ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆದವು. ಬೆಳ್ಳಕ್ಕಿ ಬಾನಂಗಳದಲ್ಲಿ ಹಾರುತ್ತಾ ಬಾನಿಗೆ ಏಣಿ ಹಾಕಿದಂತೆ ಮಾಡಿದುವು. ಹೀಗೆ ಕಾಡುತುಂಬ ಪ್ರೀತಿಯ ಹೊಳೆಯು ಕೋಡಿಯಂತೆ ಹರಿಯಿತು. | |
| 29. | ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ಸಿ.ಪಿ.ಕೆ. ಅವರು ನೀಡುವ ಹೋಲಿಕೆಗಳು ಯಾವುವು ?<br>***ಉತ್ತರ :***<br>ಕವಿ ಸಿ.ಪಿ.ಕೆ.ಯವರು ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯ ಅದ್ಭುತ ಕಾರ್ಯಗಳನ್ನು ಹೋಲಿಕೆಯಾಗಿ ನೀಡುತ್ತಾ ನಮ್ಮ ಜೀವನವು ತಟ್ಟೆಯ ಕರ್ಪೂರದಂತೆ, ದೀಪದೆದುರಿಗೆ ಕತ್ತಲು ಸರಿಯುವಂತೆ, ಹಡಗು ಬಂದರನ್ನು ಶಾಂತ ರೀತಿಯಿಂದ ಸೇರುವಂತೆ ನಾವು ನಮ್ಮದಾದ ಕರ್ತವ್ಯಗಳನ್ನು ಶಾಂತ ರೀತಿಯಿಂದ ಮಾಡಿ ಮುಗಿಸಬೇಕೆಂದು ಕರೆ ನೀಡಿದ್ದಾರೆ. | |
| 30. | ವೈದ್ಯರು ಭೀಮನಾಯಕನ ಮಗನ ಪ್ರಾಣವನ್ನು ಹೇಗೆ ಉಳಿಸಿದರು ? ವಿವರಿಸಿ.<br>***ಉತ್ತರ :***<br>ವೈದ್ಯರು ಭೀಮನಾಯಕನ ಮಗುವಿನ ನಾಡಿಯನ್ನು ಹಿಡಿದು ಜ್ವರದ ತೀವ್ರತೆಯನ್ನು ಪರೀಕ್ಷಿಸಿದರು. ಔಷಧಿಯ ಮಾತ್ರೆಗಳನ್ನು ಮಗುವಿಗೆ ಕುಡಿಸಿದರು. ಯಾವುದೋ ಸೊಪ್ಪು ಬೇಕಾದಾಗ ತಾವೇ ಕಾಡಿನಲ್ಲಿ ಅಲೆದು ಸೊಪ್ಪು ತಂದು ರಸಮಾಡಿ ಕುಡಿಸಿದರು. ತಮ್ಮ ಕುಪ್ಪಿಯಲ್ಲಿದ್ದ ಲೇಹವನ್ನು ಹಣೆಯ ತುಂಬ ಬಳಿದರು. ಆಗ ಮಗು ತೊಂದರೆಯಿಂದ ಮುಕ್ತವಾಗಿ ಕಣ್ಣು ಮುಚ್ಚಿ ಮಲಗಿಕೊಂಡಿತು. ಹೀಗೆ ಉಪಚಾರ ಮಾಡಿ ವೈದ್ಯರು ಭೀಮನಾಯಕನ ಮಗನ ಪ್ರಾಣ ಉಳಿಸಿದರು. | |
| 31. | ಭೀಮನಾಯಕನ ಮನಸ್ಸನ್ನು ಪರಿವರ್ತಿಸಿದ ವೈದ್ಯರ ಮಾತುಗಳನ್ನು ಕುರಿತು ಬರೆಯಿರಿ.<br>***ಉತ್ತರ :***<br>ಮಗುವಿಗೆ ಔಷಧೋಪಚಾರ ಮುಗಿದ ನಂತರ ವೈದ್ಯರು ಭೀಮನಾಯಕನಿಗೆ "ಒಳ್ಳೇದು ಮಾಡಿದಿ. ಇದೊಂದು ದಿನ ಹೋಗಿದ್ದರೆ ನಿಮಗೆ ನಿಮ್ಮ ಮಗು ದಕ್ಕುತ್ತಿದ್ದಿಲ್ಲ. ದೇವರು ನನಗೂ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಳ್ಳೆಯ ಬುದ್ಧಿ ಕೊಟ್ಟು ನಾನು ಹೊರಟು ಬಂದೆ. ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ ಕಾಯುವ ಕೆಲಸಕ್ಕಾಗಿ ಮನಮುಟ್ಟಿ ದುಡಿದವರಿಗೆ ದೇವರ ಸಹಾಯ ಇದ್ದೇ ಇರುತ್ತದೆ.” ಎಂದು ಹೇಳಿದ ವೈದ್ಯರ ಮಾತುಗಳು ಭೀಮನಾಯಕನ ಮನಸ್ಸನ್ನು ಪರಿವರ್ತಿಸಿದವು. | |
| IV. | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಬಸವರಾಜ ಸಬರದ :<br>***ಉತ್ತರ :***<br>ಡಾ. ಬಸವರಾಜ ಸಬರದ ಅವರು ಕ್ರಿ.ಶ. ೧೯೫೪ ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ಜನಿಸಿದರು. ದಲಿತ–ಬಂಡಾಯ ಚಳುವಳಿಯ ನೇತಾರರಾಗಿದ್ದಾರೆ. ನನ್ನವರ ಹಾಡು, ಹೋರಾಟ, ಮೂಡಲಕ ಕೆಂಪು ಮೂಡ್ಯಾವ, ನೂರು ಹನಿಗಳು, ದನಿಯೆತ್ತಿ ಹಾಡೇನ, ಬೆಳದಿಂಗಳು ಬಿಸಿಲಾತು, ಪದಕಟ್ಟಿ ಹಾಡೇನ – ಇವು ಅವರ ಕವನ ಸಂಕಲನಗಳು. ಪ್ರತಿರೂಪ, ರೆಕ್ಕೆ ಮೂಡಿದಾಗ, ನರಬಲಿ, ಬೆಳ್ಳಕ್ಕಿ ಸಾಲು – ಇವು ಅವರು ಬರೆದ ಪ್ರಮುಖ ನಾಟಕಗಳಾಗಿವೆ. ಇವರ ಸಾಹಿತ್ಯ ಸೇವೆಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ಕುವೆಂಪು ಸಾಹಿತ್ಯ ಪುರಸ್ಕಾರ, ಪೆರ್ಲ ಕೃಷ್ಣಭಟ್ಟ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ, ಸಾಹಿತ್ಯಶ್ರೀ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. | |
| 33. | ರಮೇಶಗೌಡ ಎಂ.ಕೆ. :<br>***ಉತ್ತರ :***<br>ರಮೇಶಗೌಡ ಎಂ.ಕೆ. ಇವರು ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕು, ಕಿತ್ತೂರು ಗ್ರಾಮದಲ್ಲಿ 1975 ರಲ್ಲಿ ಜನಿಸಿದರು. ಇವರು ಅಮೃತಕ್ಕೆ ಹಾರಿದ ಗರುಡ, ರೂಪಬಯಲು, ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳು ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ ರತ್ನಾಕರವರ್ಣಿ ಮುದ್ದಣ ದತ್ತಿ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ವರ್ಷದ ಉತ್ತಮ ಕೃತಿ ಪ್ರಶಸ್ತಿಗಳು ಲಭಿಸಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| V. | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | 1 × 3 = 3 |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 34. | ವೇಷಧರಿಸಿ ಫಲವೇನಯ್ಯ<br>ವೇಷದಂತಾಚರಣೆ ಇಲ್ಲದನ್ನಕ್ಕ<br>ವೇದಾಂತವನೋದಿ ಫಲವೇನಯ್ಯ<br>ಬ್ರಹ್ಮ ತಾನಾಗದನ್ನಕ್ಕ<br>ನಾನಾ ಕೆರೆಯ ತೋಡಿ ಫಲವೇನಯ್ಯ<br>ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ<br>***ಉತ್ತರ :***<br>ಈ ಪದ್ಯಭಾಗವನ್ನು ಸೊನ್ನಲಿಗೆಯ ಸಿದ್ಧರಾಮರು ಬರೆದಿರುವ ವಚನಗಳಿಂದ ಆರಿಸಿಕೊಳ್ಳಲಾಗಿದೆ. ಸಿದ್ಧರಾಮರು ಈ ವಚನದ ಮೂಲಕ ವ್ಯಕ್ತಿಯ ವೇಷ ಮತ್ತು ಆಚರಣೆಗಳು ಒಂದೇ ಆಗಿರಬೇಕು. ಇಲ್ಲದಿದ್ದರೆ ಆ ಮನುಷ್ಯನಿಗೆ ಗೌರವ ಇರುವುದಿಲ್ಲ. ವೇದಗಳನ್ನು ಓದಿದರೆ ಮಾತ್ರ ಸಾಲದು, ಅದರ ಸಾರವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಆಗ ಆ ವ್ಯಕ್ತಿ ಜ್ಞಾನಿಯಾಗುತ್ತಾನೆ. ವೇಷವನ್ನು ಧರಿಸಿ ಅದಕ್ಕೆ ತಕ್ಕದಾದ ಆಚರಣೆ ಇಲ್ಲದವರ ಹಾಗೂ ವೇದಾಂತಗಳನ್ನು ಓದಿ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳದವರ ಬದುಕು ಕೆರೆಯನ್ನು ತೋಡಿ ನೀರು ಬರದೆ ಇದ್ದರೆ ಅವು ಹೇಗೆ ನಿಷ್ಪ್ರಯೋಜಕವಾಗುತ್ತವೆಯೋ ಹಾಗೆ ಅವರ ಬದುಕು ಸಹಿತ ನಿಷ್ಪ್ರಯೋಜಕವಾಗುತ್ತದೆ ಎನ್ನುವ ಸಂದೇಶವನ್ನು ಈ ವಚನದ ಮೂಲಕ ತಿಳಿಸಿದ್ದಾರೆ. | |
| VI. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 35. | "ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ."<br>***ಉತ್ತರ :***<br>*ಅಲಂಕಾರದ ಹೆಸರು :* ಉಪಮಾಲಂಕಾರ<br>*ಲಕ್ಷಣ :* ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.<br>*ಉಪಮೇಯ :* ಮಗುವಿನ ಮುಖ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉಪಮಾನ :* ಚಂದ್ರ<br>*ಉಪಮಾವಾಚಕ :* ಅಂತೆ<br>*ಸಮಾನಧರ್ಮ :* ಚಂದ್ರ ಮತ್ತು ಮಗುವಿನ ಮುಖದಲ್ಲಿರುವ ಮನೋಹರತೆ.<br>*ಸಮನ್ವಯ :* ಇಲ್ಲಿ ಮಗುವಿನ ಮುಖ ಎಂಬ ಉಪಮೇಯವನ್ನು ಚಂದ್ರ ಎಂಬ ಉಪಮಾನದ ಮೂಲಕ ಮನೋಹರತೆ ಎಂಬ ಸಮಾನಧರ್ಮವನ್ನು ಅಂತೆ ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ. | |
| VII. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಎರಡಕ್ಕೆ ಮಾತ್ರ)** | 2 × 3 = 6 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36. | ಪೆನ್ನು ಖಡ್ಗಕ್ಕಿಂತ ಹರಿತ.<br>**ಅಥವಾ**<br>ಕಟ್ಟುವುದು ಕಠಿಣ ಕೆಡಹುವುದು ಸುಲಭ. | |
| 37. | ಅತಿಯಾಸೆ ಗತಿಗೇಡು.<br>**ಅಥವಾ**<br>ಮನಸ್ಸಿದ್ದರೆ ಮಾರ್ಗ. | |
| VIII. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕೃತಿ, ಕರ್ತೃ ಮತ್ತು ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 38. | "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."<br>***ಉತ್ತರ :***<br>ಈ ವಾಕ್ಯವನ್ನು ಅ.ರಾ.ಮಿತ್ರರವರು ಬರೆದ 'ಮಹಾಭಾರತದ ಪಾತ್ರ ಸಂಗತಿಗಳು' ಪುಸ್ತಕದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಗಿಳಿ ಇಂದ್ರನಿಗೆ ಹೇಳಿತು.<br>ಮರ ರೋಗ ಬಡತನಗಳಿಂದ ತನ್ನ ಹಸಿರಿನ ಸಿರಿ ಹಾಗೂ ಫಲ–ಪುಷ್ಪ ಸಮೃದ್ಧಿಯನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕಳೆದುಕೊಂಡಿತು. ಒಣಗಿ ಬರಡಾಗಿ ನಿಂತಿರುವ ಮರದ ಅವಸ್ಥೆಯನ್ನು ನೋಡಲಾಗದೆ ಗಿಳಿ ಇಂದ್ರನಿಗೆ 'ದೇವರಾಜ ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರಕ್ಕೆ ಹಸಿರಿನಿಂದ ನಳನಳಿಸುವ ಫಲ-ಪುಷ್ಪ ಭಾರದಿಂದ ಬೀಗುವ ನೆರಳು ಕೊಡುವ ವರವನ್ನು ದಯಪಾಲಿಸು' ಎಂದು ಹೇಳುವ ಮಾತಿನಲ್ಲಿ ಕೃತಜ್ಞತಾ ಭಾವ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 39. | "ಅವನು ಬಂದರೆ ಕರೆದುಕೊಂಡು ಹೋಗು ತಾಯಿ."<br>***ಉತ್ತರ :***<br>ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ಅವರು ಬರೆದ 'ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಜೀವನ ಚರಿತ್ರೆಯ, ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಎಂಬ ಪಾಠದಿಂದ ಆರಿಸಲಾಗಿದ.<br>ಈ ಮಾತನ್ನು ಪಂಚಾಕ್ಷರ ಗವಾಯಿಗಳು ಸಿದ್ಧಮ್ಮ ತಾಯಿಗೆ ಹೇಳುತ್ತಾರೆ. ಪಂಚಾಕ್ಷರ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆ-ಆಲೂರಿನಲ್ಲಿ ಕ್ಯಾಂಪ್ ಹಾಕಿದ್ದ ಸಂದರ್ಭದಲ್ಲಿ ತಾಯಿಯಾದ ಸಿದ್ಧಮ್ಮನವರು ಪುಟ್ಟರಾಜನನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮುದ್ದು ಮಗನನ್ನು ನೋಡಿದ ತಾಯಿಗೆ ಅಂತಃಕರಣ ತುಂಬಿಬಂತು. ಪಂಚಾಕ್ಷರ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿ ಕೊಡುವಂತೆ ಬೇಡಿಕೊಂಡರು. ಗವಾಯಿಗಳು 'ಅವನು ಬಂದರೆ ಕರೆದುಕೊಂಡು ಹೋಗು ತಾಯಿ' ಎಂದು ಹೇಳಿದ ಮಾತಿನಲ್ಲಿ ವಾತ್ಸಲ್ಯ ಭಾವ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 40. | "ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ."<br>***ಉತ್ತರ :***<br>ಈ ವಾಕ್ಯವನ್ನು ಸುಕನ್ಯಾ ಮಾರುತಿಯವರ 'ಸಮಗ್ರ ಕವನ ಸಂಕಲನ' ಕೃತಿಯ ಏಣಿ ಪದ್ಯದಿಂದ ಆರಿಸಲಾಗಿದೆ.<br>ಈ ಮಾತನ್ನು ಏಣಿಯು ತನ್ನ ಸಹಾಯ ಪಡೆದು ಮೇಲೇರಿದ ಜನರನ್ನು ಕುರಿತು ಹೇಳುತ್ತದೆ. ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯ ಪಡೆದು ಪದವಿ, ಅಧಿಕಾರ, ಕೀರ್ತಿ, ಹಣ, ಗೌರವ, ಯಶಸ್ಸು ಪಡೆದು ವ್ಯಕ್ತಿ ಮೇಲೇರುತ್ತಾನೆ. ಹೀಗೆ ಮೇಲೇರಿದವರು ಅಹಂಕಾರದಿಂದ ಮೇಲೇರಲು ಸಹಾಯ ಮಾಡಿದವರನ್ನು ತಿರಸ್ಕರಿಸುತ್ತಾರೆ. ಆದ್ದರಿಂದ ಇವರಿಗೆ ಭಾರಹೊತ್ತವರ ಕಾಳಜಿಯೇ ಇಲ್ಲ ಎಂದು ಹೇಳುವ ಮಾತಿನಲ್ಲಿ ಶ್ರಮಿಕರ ಕುರಿತು ಇರುವ ದಯಾಪರ ಕಾಳಜಿ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 41. | "ಸಿಡುಕು ಮಿಡುಕನು ತೊರೆದು ಮೌನಿಯಾಗು."<br>***ಉತ್ತರ :***<br>ಈ ವಾಕ್ಯವನ್ನು ಸಿ.ಪಿ.ಕೆ. ಅವರ 'ಬೊಗಸೆ' ಕವನ ಸಂಕಲನದ 'ಸದ್ದು ಮಾಡದಿರು' ಪದ್ಯದಿಂದ ಆರಿಸಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕವಿ ಮಾನವನ ಬದುಕನ್ನು ಕುರಿತು ಈ ಮಾತನ್ನು ಹೇಳಿದ್ದಾರೆ. ಮಾನವ ತನ್ನ ಅಹಂಕಾರವನ್ನು ತೊರೆದು ಕತ್ತಲೆಯು ದೀಪದ ಎದುರು ಮೌನವಾಗಿ ಮಾಯವಾಗುವಂತೆ, ಕರ್ಪೂರ ಮೌನವಾಗಿ ಕರಗುವಂತೆ, ರವಿಯ ಕಿರಣಗಳಿಗೆ ಕರಗುವ ಇಬ್ಬನಿಯ ರೀತಿಯಲ್ಲಿ ಮಾನವನು ಸಿಡುಕು ಮಿಡುಕನು ತೊರೆದು ಮೌನಿಯಾಗಬೇಕು. ತನ್ನದಾದ ಕರ್ತವ್ಯಗಳನ್ನು ಶಾಂತರೀತಿಯಿಂದ ಮಾಡಿ ಮುಗಿಸಬೇಕು ಎಂದು ಹೇಳಿದ ಮಾತಿನಲ್ಲಿ ಜೀವನದ ಮೌಲ್ಯಗಳು ಸ್ವಾರಸ್ಯಕವಾಗಿ ಮೂಡಿ ಬಂದಿವೆ. | |
| 42. | "ಬೊಬ್ಬೆ ಹೊಡೆದಾವೆ ಬಾಳೆಮೀನು."<br>***ಉತ್ತರ :***<br>ಈ ವಾಕ್ಯವನ್ನು ಮತಿಘಟ್ಟ ಕೃಷ್ಣ ಮೂರ್ತಿಯವರು ಸಂಗ್ರಹಿಸಿರುವ 'ಕನ್ನಡ ಜನಪದ ಸಾಹಿತ್ಯ ಭಂಡಾರ' ಪುಸ್ತಕದ 'ಮೂಡಲ್ ಕುಣಿಗಲ್ ಕೆರೆ' ಜನಪದ ಗೀತೆಯಿಂದ ಆರಿಸಲಾಗಿದೆ.<br>ಈ ಮಾತನ್ನು ಜನಪದಕಾರರು ಹೇಳಿದ್ದಾರೆ. ಕುಣಿಗಲ್ ಕೆರೆ ನೋಡುವುದಕ್ಕೆ ಸುಂದರವಾದಂತೆ, ಜನರ ಬದುಕಿಗೂ ಆಸರೆಯಾಗಿದೆ ಕೆರೆಯಲ್ಲಿ ರೈತರ ಉಪಕಸುಬು ಮೀನುಗಾರಿಕೆ ನಡೆಯುತ್ತದೆ. ಮೀನುಗಳನ್ನು ಹಿಡಿಯಲು ಹಾಕಿದ ಬಲೆಯನ್ನು ನೀರಿನಿಂದ ಮೇಲೆತ್ತಿದಾಗ ಬಲೆಯಲ್ಲಿ ಸಿಲುಕಿಕೊಂಡ ಮೀನುಗಳು ಒದ್ದಾಡುವ ಪರಿಯನ್ನು ಜನಪದರು 'ಬೊಬ್ಬೆ ಹೊಡೆದಾವ ಬಾಳೆಮೀನು' ಎಂದು ಹೇಳುವಲ್ಲಿ ಮೀನುಗಳ ಪ್ರತಿಕ್ರಿಯೆಯನ್ನು ಸ್ವಾರಸ್ಯಕರವಾಗಿ ವ್ಯಕ್ತಪಡಿಸಿದ್ದಾರೆ. | |
| 43. | "ಎಮ್ಮರಮನೆಯ ನಾರಿಯರೆ ಸಾಕು."<br>***ಉತ್ತರ :***<br>ಈ ವಾಕ್ಯವನ್ನು ಕುಮಾರವ್ಯಾಸ ಬರೆದ 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತದ' 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಪದ್ಯದಿಂದ ಆರಿಸಲಾಗಿದೆ.<br>ಈ ಮಾತನ್ನು ಉತ್ತರನು ಅರ್ಜುನನಿಗೆ ಹೇಳುತ್ತಾನೆ. ಜೀವಭಯದಿಂದ ರಣರಂಗದಿಂದ ಓಡಿಹೋಗುತ್ತಿದ್ದ ಉತ್ತರನನ್ನು ಅರ್ಜುನ ತಡೆಯುತ್ತಾನೆ. ಶತ್ರುಗಳಿಗೆ ಬೆನ್ನು ತೋರಿದರೆ ಪಾಪ ತಗಲುತ್ತದೆ. ಯುದ್ಧದಲ್ಲಿ ಮರಣವನ್ನಪ್ಪಿದರೆ ಇಂದ್ರ ಪದವಿ ದೊರೆಯುತ್ತದೆ. ಅಲ್ಲಿ ಸುರರ ಸತಿಯರು ಇರುತ್ತಾರೆ ಎಂದು ಹೇಳಿದಾಗ ಉತ್ತರನು ನಮ್ಮ ಅರಸುತನವೇ ನಮಗೆ ಇಂದ್ರಪದವಿ. ಸುರರ ಸತಿಯರ ಸ್ಥಾನವನ್ನು ನಮ್ಮ ಅರಮನೆಯ ನಾರಿಯರು ತುಂಬುತ್ತಾರೆ. ನನ್ನನ್ನು ಬಿಟ್ಟು ಕಳುಹಿಸು ಎಂದು ಕೇಳಿಕೊಳ್ಳುವಲ್ಲಿ ಉತ್ತರನ ಭಯದ ಮಾತುಗಳು ಸ್ವಾರಸ್ಯಕರವಾಗಿ ಮೂಡಿಬಂದಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IX. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | 1 × 4 = 4 |
| 44. | ಕೆಸರೊಳಿದ್ದರು ..............................................<br>..............................................................<br>..............................................................<br>................................................ ಸಾರ್ಥಕತೆಗೆ.<br>**ಅಥವಾ**<br>ಒಂದು ಬಾಣಕೆ ............................................<br>..............................................................<br>..............................................................<br>................................ ಹೋರಾಡು ಹಗಲಿರುಳು.<br>***ಉತ್ತರ :***<br>ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ<br>ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ,<br>ಮಸಗುವಂಬುಜದಂತೆ ಧ್ಯೇಯದಾಳ್ವಿಸಕೆ<br>ಬಸಮಾಗು, ಬಂದ ಮನುಜತೆಯ ಸಾರ್ಥತೆಗೆ.<br>**ಅಥವಾ**<br>ಒಂದು ಬಾಣಕೆ ಗುರಿಯು ಹಲವಿರುವುದುಂಟೆ ?<br>ಒಂದು ದೇಹದೊಳಾತ್ಮವೆರಡಿರುವುದುಂಟೆ ?<br>ಒಂದು ಜೀವನಕೇಕೆ ಹಲವು ಸಾಧ್ಯಗಳು ?<br>ಒಂದೇ ಹೆಗ್ಗುರಿಗೆ ಹೋರಾಡು ಹಗಲಿರುಳು. | |
| X. | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**<br>ವಿಷಯಾಂಶಕ್ಕೆ<br>ಭಾಷಾಶೈಲಿ, ಪದ ಬಳಕೆಗೆ<br>ಒಟ್ಟು | 1 × 4 = 4<br>3 ಅಂಕಗಳು<br>1 ಅಂಕ<br>4 ಅಂಕಗಳು |
| 45. | ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವನ್ನು ಸ್ವಾರಸ್ಯಕರವಾಗಿ ಬರೆಯಿರಿ.<br>**ಅಥವಾ**<br>ನನ್ನ ಗೋಪಾಲ ಪಾಠದಲ್ಲಿ ವರ್ಣಿಸಿದ ಪ್ರಕೃತಿಯ ವರ್ಣನೆಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :* | |
| | ಗೋಪಾಲನ ತಾಯಿ ಬೆಳಗಾಗುತ್ತಲೆ, ಗೋಪಾಲ ಬೆಳಗಾಯ್ತು ಮೇಲೇಳು ಎಂದಾಗ ಗೋಪಾಲ, ಅಮ್ಮ ನಾನು ಆಗಲೆ ಎದ್ದು ಸ್ನಾನ ಮಾಡಿ ಗೋಪಾಲನ ಪೂಜೆಗೆ ಬೇಕಾದ ಹೂವುಗಳನ್ನು ಕೊಯ್ಯಲೆಂದು ಬನಗಳಿಗೆ ಹೋಗಿದ್ದೆ ಎಂದು ಹೇಳುತ್ತಾನೆ. ಹೂವುಗಳನ್ನು ತೋರಿಸುತ್ತಾ ಹೂಬನ ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು ಎಂದು ಹೇಳುತ್ತಾನೆ. ನೀನೊಬ್ಬಳಲ್ಲಿದ್ದಿದ್ದರೆ ಮನೆಗಿಂತ ಬನವೆ ಸೊಗಸಮ್ಮ ಎನ್ನುತ್ತಾನೆ. ಆಗ ತಾಯಿ ಅದು ಗೋಪಾಲನ ಲೀಲೆ. ನೀನು ಗಂಜಿಯುಂಡು ಬಾ ! ಶಾಲೆಗೆ ಹೊತ್ತಾಗುತ್ತದೆ ಎನ್ನುತ್ತಾಳೆ. ಆಗ ಗೋಪಾಲ ಶಾಲೆಯಿಂದ ಕಾಡುದಾಟಿ ಬರುವಾಗ ನನಗೆ ಹೆದರಿಕೆ ಆಗುತ್ತದೆ. ನನ್ನ ಸ್ನೇಹಿತರಿಗೆಲ್ಲ ಆಳುಗಳಿದ್ದಾರೆ ನನಗೆ ಮಾತ್ರ ಯಾರು ಇಲ್ಲ ಎನ್ನುತ್ತಾನೆ. ಆಗ ತಾಯಿ ಅವರೆಲ್ಲ ಶ್ರೀಮಂತರ ಮಕ್ಕಳು ನಮಗೆಲ್ಲಿ ಬರಬೇಕು. ನೂಲು ಮಾರಿ ಬಂದ ಮೂರು ಕಾಸಿನಲ್ಲಿ ಸಂಸಾರ ನಡೆಯಬೇಕು. ಆ ಗೋಪಾಲ ಕೊಡಬೇಕು, ನಾವು ಉಣಬೇಕು ಎನ್ನುತ್ತಾಳೆ. ಆಗ ಗೋಪಾಲ ನನಗೆ ನೀನು ಹೊಸ ಪಂಚೆ ಕೊಡುತ್ತೇನೆ ಎಂದು ಹೇಳಿದ್ದೆ; ಇಂದು ಕೊಡುತ್ತೀಯಾ ? ಎಂದು ಕೇಳಿದಾಗ ಗಂಜಿಯುಂಡು ಬಾ ಕೊಡುತ್ತೇನೆ ಎನ್ನುತ್ತಾಳೆ. ಮಗನಿಗೆ ಹೊಸ ಪಂಚೆ ಕೊಟ್ಟು ಹಣೆಗೆ ತಿಲಕವನ್ನಿಟ್ಟು ನಿನಗೆ ಕಾಡಿನಲ್ಲಿ ಹೆದರಿಕೆಯಾದರೆ ನಿನ್ನ ಅಣ್ಣ ಗೋಪಾಲನನ್ನು ಕೂಗು ಬರುತ್ತಾನೆ ಎಂದು ಹೇಳುತ್ತಾಳೆ. ಗೋಪಾಲ ಅವನು ಯಾರಮ್ಮ ಎಂದು ಕೇಳಿದಾಗ ಅವನು ನನ್ನ ಹಿರಿಯ ಮಗ, ನಿನ್ನ ಅಣ್ಣ ಎಂದು ಹೇಳಿ ಮಗನನ್ನು ಶಾಲೆಗೆ ಕಳುಹಿಸಿಕೊಡುತ್ತಾಳೆ. ಇಲ್ಲಿ ತಾಯಿ ಮಗನ ಬಾಂಧವ್ಯ, ತಾಯಿಗೆ ಶಿಕ್ಷಣದ ಮೇಲಿನ ಪ್ರೇಮ, ಅವಳ ನಿಷ್ಕಲ್ಮಷ ಭಕ್ತಿ ಇವರ ಸಂಭಾಷಣೆಯಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| | **ಅಥವಾ** | |
| | ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿ ಸೌಂದರ್ಯ ತುಂಬಾ ಸುಂದರವಾಗಿ ವರ್ಣಿತವಾಗಿದೆ. ತಾಯಿ ತನ್ನ ಮಗನನ್ನು ಬೆಳಗಾಯ್ತು ಎದ್ದೇಳು ಎಂದು ಹೇಳುವಾಗ – ನೋಡಲ್ಲಿ, ಸೂರ್ಯ ನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಕೇಳಲ್ಲಿ ಹಕ್ಕಿಗಳು ಹಾಡುತ್ತ, ಹಾರಾಡಿ ಕರೆಯುತ್ತಿವೆ ನಿನ್ನ ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ ಎಂದು ಹೇಳುತ್ತಾಳೆ. ಗೋಪಾಲ ಹೂ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬನದ ಸೊಗಸನ್ನು ವರ್ಣಿಸುತ್ತಾ ಬನದಲ್ಲಿ ಏನಮ್ಮ ಸೊಗಸು! ಏನು ಆನಂದ! ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತಬಾಳೆಯ ಹೂವು, ಗೋರಂಟೆಯ ಹೂವು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು. ಹಕ್ಕಿಗಳ ಇಂಪಾದಗಾನ! ತಂಗಾಳಿ! ಸೂರ್ಯದೇವನ ಹೊಂಬೆಳಕು! ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಗಳು ಮಿರುಗುವ ಲೀಲೆಯನ್ನು ನೋಡಿದರೆ ಮನೆಗಿಂತ ಬನವೆ ಸೊಗಸಮ್ಮ ನೀನೊಬ್ಬಳಲ್ಲಿದ್ದಿದ್ದರೆ ಎಂದು ಹೇಳುತ್ತಾನೆ. ಗೋಪಾಲ ಶಾಲೆಯಿಂದ ಕಾಡು ದಾಟಿ ಮನೆಗೆ ಬರುವಾಗ ಕಾಡಿನ ದಾರಿಯಲ್ಲಿ ಹೂವಿನ ಮರ ಹಾಗೂ ನೇರಿಲ ಮರಗಳನ್ನು ನೋಡಿ, ಮರದಲ್ಲಿ ಏನು ಹೂವಿನ ಗೊಂಚಲು! ಭಾರ ಹೆಚ್ಚಾಗಿ ಮರ ತಲೆಬಾಗುತ್ತಿದೆ. ಈ ನೇರಿಲ ಹಣ್ಣು ಎಷ್ಟು ಕಪ್ಪಾಗಿವೆ ಎನ್ನುತ್ತಾನೆ. ಈ ಪಾಠದಲ್ಲಿ ಪ್ರಕೃತಿಯ ಸೌಂದರ್ಯ ಮನೋಹರವಾಗಿ ಮೂಡಿಬಂದಿದೆ. | |
| XI. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | $1 \times 4 = 4$ |
| | **(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | ( 2 + 2 ) |
| 46. | ಕೇದಾರ ದೇವಾಲಯ ಬಹು ಸುಂದರವಾಗಿದೆ. ಗರ್ಭಗುಡಿಯ ಒಳಗೆ ಇರುವ ಕೇದಾರೇಶ್ವರ ಅದು ಲಿಂಗವೂ ಅಲ್ಲ, ಮೂರ್ತಿಯೂ ಅಲ್ಲ, ಬರೇ ಒಂದು ಒರಟು ಕಲ್ಲಿನ ಬಂಡೆ. ಪರ್ವತದ ಶಿಖರಾಕೃತಿಯ ಮೇಲೆ ದೇವಾಲಯ ನಿರ್ಮಿಸಿದಂತೆ ಭಾಸವಾಗುತ್ತದೆ. ಪ್ರಾಯಶಃ ಹೊರಗಿನ ಪರ್ವತದ ಸಾಂಕೇತಿಕ ಪ್ರಕೃತಿಯ ಪೂಜೆ ಒಳಗೆ ನಡೆಯುತ್ತದೆ. ಜಾತಿ, ಮತ, ಲಿಂಗ ಯಾವ ಭೇದವೂ ಇಲ್ಲದೆ ಪ್ರತಿಯೊಬ್ಬರೂ ತಾವೆ ಮುಟ್ಟಿ ಪೂಜಿಸುವ ಅಪೂರ್ವ ಅವಕಾಶ ಇಲ್ಲಿದೆ. ಆ ಎತ್ತರದಲ್ಲಾದರೂ ಮನುಷ್ಯ ಮೇಲು-ಕೀಳು ಮರೆತಿದ್ದಾನೆ ಎಂಬುದು ಸಂತೋಷದ ಸಂಗತಿ. ಕೇದಾರನಾಥನ ಬಗೆಗೆ ಪುರಾಣದಲ್ಲಿ ವಿಚಿತ್ರವಾದ ಕಥೆಯೊಂದಿದೆ. ಒಮ್ಮೆ ಶಿವನು ಗೂಳಿಯ ರೂಪವನ್ನು ಧರಿಸಿ ಪರ್ವತ ಪ್ರದೇಶದಲ್ಲಿ ಅಲೆಯುತ್ತಿದ್ದನು. ಅಲ್ಲಿದ್ದ ಪಾಂಡವರು ಇದನ್ನು ತಿಳಿದು ಆ ಗೂಳಿಯನ್ನು ಹಿಡಿಯಲು ಪ್ರಯತ್ನಿಸಿದರು. ತಪ್ಪಿಸಿಕೊಂಡು ಓಡುತ್ತಿದ್ದ ಗೂಳಿ ಭೂಮಿಯೊಳಗೆ ನುಗ್ಗಲು ಪ್ರಯತ್ನಿಸಿತು. ಆಗ ಭೀಮನು ಅದರ ಹಿಂಭಾಗವನ್ನು ತಬ್ಬಿಕೊಂಡನು. ಅದೆ ಶಿಲಾರೂಪದಲ್ಲಿ ಉಳಿದುಕೊಂಡು ಕೇದಾರೇಶ್ವರ ಆಗಿದೆ. ಗೂಳಿಯ ಇನ್ನುಳಿದ ಭಾಗಗಳಾದ ಕಾಲುಗಳು – ತುಂಗಾನಾಥ, ಮುಖ – ರುದ್ರನಾಥ, ಹೊಟ್ಟೆ – ಮಹೇಶ್ವರ, ಶಿರ – ಕಪಾಲೇಶ್ವರ ಹೀಗೆ ಐದು ಕಡೆಗಳಲ್ಲಿ ಶಿವ ಗೋಚರನಾದ. ಇವುಗಳೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪಂಚಕೇದಾರಗಳೆಂದು ಪ್ರಸಿದ್ಧವಾಗಿವೆ. ಮುಂದಿರದ ಹೊರಗೆ ಈಶಾನ್ಯಕುಂಡ, ಅಮೃತಕುಂಡ, ಹಂಸಕುಂಡ, ರೇತಸಕುಂಡ ಎಂಬ ತೀರ್ಥಗಳಿವೆ. ದೇವಸ್ಥಾನದ ಸ್ವಲ್ಪದೂರದಲ್ಲಿ ಶಂಕರಾಚಾರ್ಯರ ಸಮಾಧಿ ಇದೆ.<br>ಪ್ರಶ್ನೆಗಳು :<br>ಅ) ಪುರಾಣದಲ್ಲಿ ಕೇದಾರನಾಥನ ಬಗೆಗೆ ಇರುವ ವಿಚಿತ್ರ ಕಥೆ ಯಾವುದು ?<br>ಬ) ಕೇದಾರವನ್ನು ದರ್ಶಿಸಿದವರಿಗೆ ಉಂಟಾಗುವ ಸಂತೋಷದ ಸಂಗತಿ ಯಾವುದು ?<br>**ಉತ್ತರ :**<br>ಅ) ಒಮ್ಮೆ ಶಿವನು ಗೂಳಿಯ ರೂಪವನ್ನು ಧರಿಸಿ ಪರ್ವತ ಪ್ರದೇಶದಲ್ಲಿ ಅಲೆಯುತ್ತಿದ್ದನು. ಅಲ್ಲಿದ್ದ ಪಾಂಡವರು ಇದನ್ನು ತಿಳಿದು ಆ ಗೂಳಿಯನ್ನು ಹಿಡಿಯಲು ಪ್ರಯತ್ನಿಸಿದರು. ತಪ್ಪಿಸಿಕೊಂಡು ಓಡುತ್ತಿದ್ದ ಗೂಳಿ ಭೂಮಿಯೊಳಕ್ಕೆ ನುಗ್ಗಲು ಪ್ರಯತ್ನಿಸಿತು. ಆಗ ಭೀಮನು ಅದರ ಹಿಂಭಾಗವನ್ನು ತಬ್ಬಿಕೊಂಡನು. ಅದೆ ಶಿಲಾರೂಪದಲ್ಲಿ ಉಳಿದುಕೊಂಡು ಕೇದಾರೇಶ್ವರ ಆಗಿದೆ ಎಂಬುದು ಕೇಧಾರನಾಥನ ಬಗ್ಗೆ ಪುರಾಣದಲ್ಲಿರುವ ವಿಚಿತ್ರ ಕಥೆಯಾಗಿದೆ.<br>ಬ) ಕೇದಾರ ದೇವಾಲಯದ ಒಳಗಿರುವ ಕೇದಾರೇಶ್ವರ. ಅದು ಮೂರ್ತಿಯೂ ಅಲ್ಲ, ಲಿಂಗವೂ ಅಲ್ಲ. ಅದೊಂದು ಒರಟು ಕಲ್ಲಿನ ಬಂಡೆ. ಅದನ್ನು ನೋಡಿದರೆ ಹೊರಗಿನ ಪರ್ವತದ ಸಾಂಕೇತಿಕ ಪೂಜೆ ಒಳಗೆ ನಡೆಯುತ್ತದೆ ಎಂಬಂತೆ ಭಾಸವಾಗುತ್ತದೆ. ಯಾವುದೇ ಜಾತಿ, ಮತ, ಲಿಂಗ ಭೇದವಿಲ್ಲದೆ ಎಲ್ಲರೂ ಮುಟ್ಟಿ ಪೂಜಿಸುವ ಅವಕಾಶ ಇಲ್ಲಿದೆ. ಕೇದಾರವನ್ನು ದರ್ಶಿಸಿದವರಿಗೆ ಮನುಷ್ಯ ಆ ಎತ್ತರದಲ್ಲಾದರೂ ಮೇಲು-ಕೀಳು ಮರೆತಿದ್ದಾನೆ ಎಂಬುದು ಸಂತೋಷದ ಸಂಗತಿಯಾಗಿದೆ. | |
| XII. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 47. | ಪರಿಸರ ಸಂರಕ್ಷಣೆ ಇಂದಿನ ಅಗತ್ಯತೆ.<br>**ಅಥವಾ**<br>ರಾಷ್ಟ್ರೀಯ ಹಬ್ಬಗಳ ಮಹತ್ವ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XIII. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 5 = 5 |
| 48. | ನಿಮ್ಮನ್ನು ಬೀದರಿನ ಸರ್ಕಾರಿ ಪ್ರೌಢಶಾಲೆಯ 'ಶ್ರಾವಣಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ವನಮಹೋತ್ಸವ ಆಚರಿಸಲು ಸಸಿಗಳನ್ನು ನೀಡುವಂತೆ ಕೋರಿ ಅರಣ್ಯ ಇಲಾಖೆಯ ಅರಣ್ಯ ಅಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಕಲಬುರ್ಗಿಯ ಸರ್ಕಾರಿ ಪ್ರೌಢಶಾಲೆಯ 'ವೈಭವ್' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 'ಮಕ್ಕಳ ದಿನಾಚರಣೆ' ಕಾರ್ಯಕ್ರಮದ ವಿವರವನ್ನು ತಿಳಿಸಿ, ಧಾರವಾಡದ ಸಾಧನಕೇರಿ ನಿವಾಸಿಯಾದ 'ಮಹೇಶ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ ಪತ್ರ :* | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವೈಯಕ್ತಿಕ ಪತ್ರ :* | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |